ದಿನಾಂಕ:04.05.2016

# ಪತ್ರಿಕಾ ಪ್ರಕಟಣೆ

2016-17 ನೇ ಸಾಲಿನಲ್ಲಿ ಆರ್.ಟಿ.ಇ ಕೋಟಾದಡಿ ಪ್ರವೇಶ ಕೋರಿ ಆನ್‌ಲೈನ್ ಮೂಲಕ ಸ್ವೀಕರಿಸಲಾದ 2,74,628 ಅರ್ಜಿಗಳ ಪೈಕಿ ನೈಜತೆಯಿಂದ ಕೂಡಿದ 1,38,229 ಅರ್ಜಿಗಳನ್ನು ಮಾತ್ರ ಲಾಟರಿ ಪ್ರಕ್ರಿಯೆಗೆ ಪರಿಗಣಿಸಲಾಗಿತ್ತು. ಅರ್ಜಿಗಳ ಲೋಪದೋಷಗಳನ್ನು ಸರಿಪಡಿಸಲು ಪೋಷಕರಿಗೆ ಹಲವು ಬಾರಿ ಎಸ್.ಎಂ.ಎಸ್. ಕಳುಹಿಸಲಾಗಿತ್ತು. ಬಹುತೇಕ ಪೋಷಕರು ತಂತ್ರಾಂಶದ ಮೂಲಕ ಲೋಪದೋಷಗಳನ್ನು ಸರಿಪಡಿಸಿರುವುದಿಲ್ಲ. ದಿನಾಂಕ: 23-4-2016 ರಂದು ಪ್ರಕಟಿಸಲಾದ ಅರ್ಹತಾ ಪಟ್ಟಿಗೆ ಹಲವಾರು ಆಕ್ಷೇಪಣೆಗಳು ಸ್ವೀಕರಿಸಲಾಗಿತ್ತು. ಈ ಆಕ್ಷೇಪಣೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಪರಿಶೀಲಿಸಿ ಅವುಗಳ ಪೈಕಿ ನ್ಯಾಯ್ಯ ಅಭ್ಯರ್ಥಿಗಳನ್ನು ಅರ್ಹತಾ ಪಟ್ಟಿಗೆ ಪುನಃ ತರಲಾಗಿದೆ. ಅದಲ್ಲದೆ ಆಕ್ಷೇಪಣಾ ಅರ್ಜಿಗಳನ್ನು ತಿರಸ್ಕರಿಸಲು ಕಾರಣವಾದ ತಾಂತ್ರಿಕ ಲೋಪಗಳನ್ನು ಮರುಪರಿಶೀಲಿಸಿ ಆಕ್ಷೇಪಣೆ ನೀಡದೆ ಇದ್ದರೂ ಸಹ, ದಿನಾಂಕ 23-4-2016ರಲ್ಲಿ ತಿರಸ್ಕರಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ಮರು ಪರಿಶೀಲನೆಗೆ ಒಳಪಡಿಸಲಾಯಿತು. ಅದರ ಪರಿಣಾಮವಾಗಿ ಇಂದು ಪ್ರಕಟಿಸಲ್ಪಡುವಂತಹ ಅರ್ಹತಾ ಪಟ್ಟಿಯಲ್ಲಿ ಸುಮಾರು 50,000 ಅಭ್ಯರ್ಥಿಗಳನ್ನು, ಹಿಂದೆ ಇದ್ದಂತಹ 1,38,229 ಅಭ್ಯರ್ಥಿಗಳ ಪಟ್ಟಿಗೆ ಸೇರಿಸಿ ಒಟ್ಟಾರೆ 1,88,077 ಅರ್ಜಿಗಳನ್ನು ಲಾಟರಿ ಪ್ರಕ್ರಿಯೆಗೆ ಅರ್ಹ ಅರ್ಜಿಗಳೆಂದು ಪರಿಗಣಿಸಲಾಗಿದೆ.

ಈ ರೀತಿ ಸಾಕಷ್ಟು, ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗಿದ್ದರೂ, ಯಾವೊಬ್ಬ ಅಭ್ಯರ್ಥಿಯೂ ಕೂಡ ತಮ್ಮ ಹಕ್ಕನ್ನು ತಾಂತ್ರಿಕ ಕಾರಣದಿಂದ ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ ಈ ಹಿಂದೆ ಪ್ರಕಟಿಸಲಾಗಿದ್ದ ಪಟ್ಟಿಯನ್ನು ಕೈಬಿಟ್ಟು ಈಗ ಪರಿಷ್ಕರಿಸಿದ ಅರ್ಹತಾ ಪಟ್ಟಿಯನ್ನು ಅಂತಿಮ ಅರ್ಹತಾ ಪಟ್ಟಿಯೆಂದು ಪರಿಗಣಿಸಿ ಈ ಅರ್ಹತಾ ಪಟ್ಟಿಗೆ ಆಕ್ಷೇಪಣೆ ಇದ್ದಲ್ಲಿ ಪೋಷಕರು ಆಕ್ಷೇಪಣೆ ಸಲ್ಲಿಸಲು ಒಂದು ದಿನದ ಕಾಲಾವಕಾಶವನ್ನು ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಲಾಟರಿ ಪ್ರಕ್ರಿಯೆಗೆ ಅರ್ಹವಿರುವ ಅಭ್ಯರ್ಥಿಗಳ ತಾತ್ಕಾಲಿಕ ಅಂತಿಮ ಅರ್ಹತಾ ಪಟ್ಟಿ ಹಾಗೂ ತಿರಸ್ಕರಿಸಲ್ಪಟ್ಟ ಅರ್ಜಿಗಳ ಪಟ್ಟಿಯನ್ನು ಪೋಷಕರ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ www.schooleducation.kar@nic.in ನಲ್ಲಿ ದಿನಾಂಕ: 04.05.2016 ರಂದು ಪ್ರಕಟಿಸಲಾಗಿದೆ. ಅಲ್ಲದೆ ತಿರಸ್ಕರಿಸಲ್ಪಟ್ಟ ಅರ್ಜಿಗಳ ಪೋಷಕರಿಗೆ ಎಸ್.ಎಂ.ಎಸ್ ಕಳುಹಿಸಲಾಗಿದೆ.

ಅರ್ಹತಾ ಪಟ್ಟಿಯಲ್ಲಿ ಹೆಸರು ಸೇರಿರದ ಮಕ್ಕಳ ಪೋಷಕರು ಒಂದು ವೇಳೆ ಆಕ್ಷೇಪಣೆ ಸಲ್ಲಿಸುವುದಾದಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಖುದ್ದಾಗಿ ಭೇಟಿ ನೀಡಿ ದಿನಾಂಕ: 05.05.2016ರ ಸಂಜೆ 5:30ರೊಳಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ಅವಕಾಶ ನೀಡಲಾಗಿದೆ. ತದನಂತರ ಅಂತಿಮಗೊಳಿಸಿದ ಅರ್ಹತಾ ಪಟ್ಟಿ ಪ್ರಕಾರ ದಿನಾಂಕ: 07.05.2016ರಂದು ಆನ್‌ಲೈನ್ ಲಾಟರಿ ಪ್ರಕ್ರಿಯೆ ಮೂಲಕ ಸೀಟು ಹಂಚಿಕೆ ಮಾಡಲಾಗುವುದು.

ಪೋಷಕರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ತಿಳಿಸಲಾಗಿದೆ.

(ವಿ. ಪೊನ್ನುರಾಜ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ